ಶ್ರೀ ಹೆಚ್ ಕೆ ಕುಮಾರ ಸ್ವಾಮಿ ಅಧ್ಯಕಷರೆ, ಸೀರಿಯಸ್ ಆಗಿ ಮಾಡುತ್ತೇವೆ, ನಾವು ಈಗಾಗಲೇ ಆತನ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ, ಸರ್ಕಾರ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿಲ್ಲ

ವಿಷಯ ಕೋಲಾರ ಕಾರಾಗೃಹದಲ್ಲಿ ಹೊರ ಜಲ್ಲೆಗಳ ಬಂಧಿಗಳನ್ನು ವರ್ಗಾಯಿಸಿರುವುದರಿಂದ ಉಂಟಾಗಿರುವ ಸಮಸ್ಯೆ ಕುರಿತು

ಶ್ರೀ ಕೆ ಶ್ರೀನಿವಾಸ ಗೌಡ ಮಾನ್ಯ ಅಧ್ಯಕ್ಷರೆ, ಕೋಲಾರ ಕಾರಾಗೃಹದಲ್ಲಿ ಅಧಿಕೃತವಾಗಿ 92 ಜನ ಬಂಧಿಗಳಿಗೆ ಮಾತ್ರ ಅವಕಾಶವಿದೆ ಅಲ್ಲಿ 231ಕ್ಕು ಹೆಚ್ಚು ಬಂಧಿಗಳಿದ್ದಾರೆ, ಅಲ್ಲಿ 4–5 ದಿವಸಗಳ ಹಿಂದೆ ಆ ಕಾರಾಗೃಗದಲ್ಲಿ ಬೆಂಗಳೂರಿನ ರೌಡಿಗಳನ್ನು ಅಲ್ಲಿ ಹಾಕಿ, ಅಲ್ಲಿನ ಬಂದಿಖಾನೆ ಸಿಬ್ಬಂದಿ ಅವರನ್ನು ಯಾವ ರೀತಿಯಾಗಿ ನಡಿಸಿಕೊಳ್ಳುತ್ತಿದ್ದಾರೆಂದರೆ, ಅವರಿಗೆ ಎರಡು ಮೊಬೈಲ್ ಫೋನಗಳ್‌ನ್ನು ಕೊಟ್ಟು ಮಾತನಾಡಿಸುವಂಧ ಪರಿಸ್ಥಿತಿಯನ್ನೂ ಇಟ್ಟುಕೊಂಡು, ಒಂದು ಕಾಲ್‌ಗೆ ರೂ 2 ಆದರೆ ರೂ 5 ಗಳನ್ನು ತೆಗೆದುಕೊಳ್ಳುವುದು, ರೊ 3 ಆದರೆ ರೂ10 ತೆಗೆದುಕೊಳ್ಳುವುದು, ಅವರಿಗೆ ಬಿರಿಯಾನಿ ಸೇರಿದಂತೆ, ಒಳ್ಳೊಳ್ಳೆ ಊಟವನ್ನು ಬೇರೆಡೆಯಿಂದ ತರಿಸಿಕೊಡುವುದರ ಮುಖಾಂತರ ಅಲ್ಲಿನ ಕಾರಾಗೃಹದ ಅಧಿಕಾರಿಗಳು ಶಾಮೀಲಾಗಿದ್ದಾರೆ ಈ ಬೆಂಗಳೊರಿನ ರೌಡಿಗಳು, ಅಲ್ಲಿ ಕೈ ಹಿಸುಕುವುದು, ಕಾಲು ಹಿಸುಕುವುದನ್ನು ಮಾಡಿ, 231 ಜನ ಬಂಧಿಗಳು ಅಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು, ಆ ಮೇಲೆ ಅವರನ್ನು ಇಲ್ಲಿಗೆ ಹಾಕಿದ್ದಾರೆ ಈಗಾಗಲೆ ಚಿಂತಾಮಣಿಯಲ್ಲಿ ಇನ್ನೊಂದು ಕಾರಾಗೃಹವನ್ನು ಕಟ್ಟದ್ದೀರಿ, ಅದು ಇದುವರೆವಿಗೂ ಆರಂಭವಾಗಿಲ್ಲ ಈಗ ಈ ಬೆಂಗಳೂರಿನಲ್ಲಿರುವ ಅನೇಕ ಅಪರಾಧಿಗಳನ್ನು ನಮ್ಮಂಧ ಜಿಲ್ಲಾಮಟ್ಟದ ಕಾರಾಗೃಹಕ್ಕೆ ಹಾಕಬೇಡಿ ಏಕೆಂದರೆ, ಈ ಬೆಂಗಳೂರಿನ ನಗರದಲ್ಲಿರುವ ರೌಡಿಸಂ ಆಗಿರಬಹುದು, ನಕ್ಸಲಿಸಂ ಆಗಬಹುದು, LTTESಹಿನ್ನಲೆ ಇರಬಹುದು ಇವ್ಯಾವುವು ಜಿಲ್ಲಾಮಟ್ಟದಲ್ಲಿ ಬಂದಿರುವುದಿಲ್ಲ ನೀವು ಈ ರೀತಿ ಅಲ್ಲಿಗೆ ಹಾಕುವುದರಿಂದ, ಅಲ್ಲಿಯು ಕೂಡ ಈ ಚಟುವಟಿಕೆಯನ್ನು ಉತ್ಪತ್ತಿ ಮಾಡಿದಂತಾಗುತ್ತದೆ ಅಲ್ಲಿಗೆ 92 ಜನ ಹಾಕಬೇಕೆಂದಿದ್ದರೆ 92 ಜನ ಬಂಧಿಗಳನ್ನೆ ಹಾಕಿ, ಬೇಕಾದರೆ ಬೇರೆ ಕಾರಾಗೃಹವನ್ನು ಕಟ್ಟಿ ಈ ರೀತಿಯಾಗದೇ ಇದ್ದರೆ ನಾಳೆ ದಿವಸ ಬೇರೆ ಜಿಲ್ಲೆಗಳಲ್ಲೂ ಕೂಡ ನಮ್ಮ ಬೆಂಗಳೂರಿನಲ್ಲಾದಂತೆ

ಚಟುವಟಿಕೆಗಳು ಪ್ರಾರಂಭವಾಗುತ್ತದೆ, ಇದನ್ನು ನಿಗ್ರಹಿಸಬೇಕಾದರೆ ಈ ಬಗ್ಗೆ ಕ್ರಮವನ್ನು ಜರುಗಿಸಬೇಕೆಂದು ಮಾನ್ಯ ಗೃಹ ಮಂತ್ರಿಗಳನ್ನು ಅಧ್ಯಕ್ಷರು ಮೂಲಕ ಕೇಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್ (ಗೃಹ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 2100 ಅಧಿಕೃತ ಸ್ಥಳಾವಕಾಶವಿದ್ದು ಸದರಿ ಕಾರಾಗೃಹದಲ್ಲಿ ಹಾಲಿ 4900 ಕ್ಕೂ ಬಂದಿಗಳಿದ್ದಾರೆ, ಅವರಲ್ಲಿ ನೆಕ್ಸಲೇಟ್, ಉಗ್ರಗಾಮಿಗಳು, ಎಲ್ ಟಿ ಟಿ ಇ ಸಂಘಟನಾ ಬಂದಿಗಳು, ದಂಡುಪಾಳ್ಯ ಗ್ಯಾಂಗ್ ನಗರದ ವಿವಿಧ ಕುಖ್ಯಾತ ರೌಡಿ ಗುಂಪಿನ ಬಂಧಿಗಳು ಹಾಗೂ ದರೋಡೆ ಪ್ರಕರಣಗಳ ಭಾಗಿಯಾಗಿರುವ ಬಂದಿಗಳೂ ದಾಖಲಿರುವುದಲ್ಲದೆ ಇವರ ಜೊತೆಯಲ್ಲಿ ಇನ್ನೂ ಹಲವಾರು ಪ್ರಕರನಗಳ ರಾಜ್ಯ ಮತ್ತು ಹೊರ ರಾಜ್ಯದ ಬಂದಿಗಳು ದಾಖಲಿರುತ್ತಾರೆ ಅವರುಗಳಲ್ಲಿ ನಗರದ ವಿರೋಧಿ ಕುಖ್ಯಾತ ರೌಡಿ ಗುಂಪಿನವರು ದಾಖಲಿದ್ದು ಇವರನ್ನು ಭದ್ರತೆ ಮತ್ತು ಆಡಳಿತ ಹಿತದೃಷ್ಟಿಯಿಂದ ಮತ್ತು ಬಂದಿಗಳ ಜೀವ ಹಿತದೃಷ್ಟಿಯಿಂದ ರಾಜ್ಯದ ವಿವಿಧ ಕಾರಾಗೃಹಗಳಿಗೆ ಅಗತ್ಯಕ್ಕೆ ತಕ್ಕಂತೆ ವರ್ಗಾಯಿಸಲಾಗುತ್ತಿದೆ ಇದೇ ರೀತಿ ಬೆಂಗಳೂರಿನ ಕಾರಾಗೃಹದಿಂದ ಕೋಲಾರ ಜಿಲ್ಲಾ ಉಪಕಾರಾಗೃಹಕ್ಕೆ ವರ್ಗಾಯಿಸಲಾಗಿರುತ್ತದೆ

ಇತ್ತೀಚೆಗೆ ಕೋಲಾರ ಜಿಲ್ಲೆಯ ಉಪ ಕಾರಾಗೃಹದಲ್ಲಿ ಸ್ಥಳೀಯ ಬಂದಿಗಳಿಗೆ ಕಿರುಕುಳ ನೀಡಲಾಗಿದೆ ಎನ್ನಲಾದ ಬೆಂಗಳೂರು ಮೂಲದ 15 ಬಂದಿಗಳ ಪೈಕಿ ತುಮಕೂರು ಜಿಲ್ಲಾ ಉಪಕಾರಾಗೃಹಕ್ಕೆ ಇಬ್ಬರನ್ನು ಮತ್ತು ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ 10 ಜನ ಬಂದಿಗಳನ್ನು ವರ್ಗಾಯಿಸಲಾಗಿದೆ

ಕೋಲಾರ ಜಿಲ್ಲಾ ಉಪ ಕಾರಾಗೃಹದಲ್ಲಿ ಅಧಿಕೃತವಾಗಿ 92 ಬಂದಿಗಳಿಗೆ ಸ್ಥಳಾವಕಾಶ ಕಲ್ಪಿಸಲಾಗಿದ್ದು ಹಾಲಿ ದಿನಾಂಕ 15 06 2007 ಕ್ಕೆ 231 ಕ್ಕೂ ಹೆಚ್ಚು ಬಂದಿಗಳು ದಾಖಲಾಗಿರುತ್ತಾರೆ ಇದೇ ರೀತಿ ತುಮಕೂರು ಚಿತ್ರದುರ್ಗ, ಹಾಸನ, ಮೈಸೂರು, ಮಂಡ್ಯ, ದಾವಣಗೆರೆ, ಬಳ್ಳಾರಿ, ಬೆಳಗಾವಿ ಕಾರಾಗೃಹಗಳಲ್ಲೂ ಅಧಿಕೃತ ಸ್ಥಳಾವಕಾಶಕ್ಕಿಂತ ಹೆಚ್ಚು

ಬಂದಿಗಳಿದ್ದು ಅಲ್ಲಿಗೂ ಸಹ ವಿವಿಧ ವಿರೋಧಿ ರೌಡಿ ಗುಂಪಿನವರನ್ನು ವರ್ಗಾಯಿಸಲಾಗಿದೆ ಈ ರೀತಿ ಬಂದಿಗಳ ಬರ್ಗಾವಣೆಯು ಸ್ಥಳೀಯ ಬಂದಿಗಳಿಗೆ ಕಿರುಕುಳ ನೀಡುವ ದೃಷ್ಟಿಯಿಂದಲ್ಲ ಇದು ಈ ಹಿಂದಿನಿಂದಲೂ ನಡೆದು ಬಂದ ಪ್ರಕ್ರಿಯೆ

ರಾಜ್ಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮರು ಹೊಂದಾಣಿಕ ಅನುದಾನದಲ್ಲಿ 11 ನೂತನ ಕಾರಾಗೃಹಗಳನ್ನು ನಿರ್ಮಿಸಲಾಗಿದೆ ಇದರಲ್ಲಿ ಚಿಂತಾಮಣಿ ಅನುದಾನದಲ್ಲಿ 11 ನೂತನ ಕಾರಾಗೃಹಗಳನ್ನು ನಿರ್ಮಿಸಲಾಗಿದೆ ಇದರಲ್ಲಿ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ನರ್ಮಿಸಲಾಗಿದೆ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ಪ್ರಾರಂಭಿಸಲು ಅಗತ್ಯವಾದ ವಿವಿಧ ವರ್ಗಗಳ ಹುದ್ದೆಗಳನ್ನು ಸೃಜನೆ ಮಾಡುವ ಬಗ್ಗೆ ಪ್ರಸ್ತಾಪನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ ಈ ಹುದ್ದೆಗಳು ಸೃಜನೆಯಾದ ನಂತರ ಚಿಂತಾಮಣಿ ತಾಲ್ಲೂಕು ಉಪ ಕಾರಾಗೃಹವನ್ನು ಪ್ರಾರಂಭಿಸಲಾಗುವುದು

ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದ್ದು ನಿಜಕ್ಕೂ ಸತ್ಯ ಇಲ್ಲಿರುವ ರೌಡಿಗಳು ಆ ಭಾಗಕ್ಕೆ ಹೋದಾಗ ಅನೇಕ ಕಿರುಕುಳಗಳನ್ನು ಕೊಡಬಹುದು ಆದುದರಿಂದ ಆದಷ್ಟು ಮಟ್ಟಿಗೆ ದೊಡ್ಡ ಜೈಲುಗಳಾದ ಇಂಡಲಗ, ಬಳ್ಳಾರಿ,ಮೈಸೂರು, ಬೆಂಗಳೂರಿನಲ್ಲಿ ಸೇರಿಸತಕ್ಕಂತ ಪ್ರಯತ್ನವನ್ನು ಮಾಡುತ್ತದ್ದೇವೆ ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿ 4900 ಇರುವ ಖೈದಿಗಳಲ್ಲಿ,ವಿಚಾರಣಾದೀನ ಖೈಧಿಗಳೇ ಹೆಚ್ಚು ಇದ್ದಾರೆ ಇತ್ತೀಚೆಗೆ ಸ್ವಲ್ಪಮಟ್ಟಿಗೆ ನೇಮಕಾತಿಯನ್ನು ಮಾಡಬಹುದೆಂದು ಆರ್ಥಿಕ ಇಲಾಖೆಯವರು ಸಹಮತಿ ಕೊಟ್ಟಿದ್ದರಿಂದ ಕೆಲವು ಸಿಬ್ಬಂದಿವರ್ಗದವರ ನೇಮಕಾತಿ ಪ್ರಕ್ರಿಯೆ ಈಗಾಗಲೇ ನಡೆದಿದೆ ಅದರಲ್ಲಿ ಸುಮಾರು 140ಕ್ಕಿಂತ ಹೆಚ್ಚು ಜನ,11 ಜೈಲರ್ ಗಳು, ಸುಮಾರು 236 ವಾರ್ಡರ್‌ಗಳನ್ನು ನೇಮಕ ಮಾಡಿಕೊಳ್ಳುವುದರ ಬಗ್ಗೆ ಈಗಾಗಲೆ ಸಂದರ್ಶನೆ ನಡೆದಿದೆ ಆ ಸಂದರ್ಶನ ಮುಗಿದ ತಕ್ಷಣವೆ, ಅವರಿಗೆ ಅಲ್ಪಾವಧಿಯ ತರಬೇತಿಯನ್ನು ಕೊಟ್ಟು ಬೇರೆ ಬೇರೆ ಜೈಲುಗಳಿಗೆ ಕಳುಹಿಸುವಂಧ ಕೆಲಸವನ್ನು ಮಾಡುತ್ತೇವೆ ಚಿಂತಾಹುಣಿಯಲ್ಲಾದಂತೆ ಈಗ ಜೈಲುಗಳು ಕಟ್ಟುವುದು ಪ್ರಾರಂಭವಾಗಿದೆ, ಸಿಬ್ಬಂದಿ ಇಲ್ಲದೇ ಕಟ್ಟಡಗಳಾಗಿವೆ ಆ ಕಾರಣಕ್ಕಾಗಿ ತಾವು ಹೇಳಿದ

ಸಲಹೆಯನ್ನು ಖಂಡಿತವಾಗಿಯು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಇದಾಗಲಾರದಂತೆ ನೋಡಿಕೊಳ್ಳುತ್ತೇವೆ

ಡಾ ಸುಧಾಕರ ರೆಡ್ಡಿ ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಗೌಡರ ಪ್ರಶ್ನೆಗೆ ಸಂಬಂದಿಸಿದಂತೆ ಈಗ ಮುಂತ್ರಿಗಳು ಕಾರಾಗೃಹದ ನೇಮಕಾತಿಯಾಗುತ್ತಿದೆ ಎಂದು ಹೇಳಿದರು, ಈಗ ಮುಂದಿರುವುದು ದಯವಿಟ್ಟು ಆ ವಿಚಾರವಲ್ಲ ಅಲ್ಲಿ ರಸ್ತೆ ಇಲ್ಲ ಸುಮಾರು ಒಂದು ವರ್ಷದ ಹಿಂದೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಪ್ರಸ್ತಾವನೆ ಬಂದಿತ್ತು ಇವತ್ತಿನವರೆಗೆ ಕಂದಾಯ ಇಲಾಖೆಯಲ್ಲಿ ಆ ರಸ್ತೆ ಅದಲು ಬದಲು ಮಾಡುವುದಾಗಬೇಕು, ಅಲ್ಲಿರುವ ರೈತರು ಜಾಗ ಬಿಟ್ಟುಕೊಡಲು ತಯಾರಿದ್ದಾರೆ, ಸರ್ಕಾರಿ ಜಾಗವನ್ನು ಅವರಿಗೆ ಮಂಜೂರು ಮಾಡಿಕೊಟ್ಟು, ಆ ರಸ್ತೆಯನ್ನು ಅವರಿಗೆ ಮಾಡಿಕೊಡುವುದಿತ್ತು ಆದರೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಕಾರಾಗೃಹವನ್ನು ಕಟ್ಟಲಾಗಿದೆ ಒಂದು ವರ್ಷದಿಂದ ಇದು ಹಾಗೆ ಉಳಿದಿದೆ, ಏತಕ್ಕೆ ಇದು ಒಂದು ವರ್ಷದಿಂದ ಹಾಗೆ ಉಳಿದಿದೆ ಎಂಬುದರ ಬಗ್ಗೆ ಸರ್ಕಾರ ಗಮನಹರಿಸಿ ಅದಷ್ಟು ಬೇಗ ಅದನ್ನು ಮಾಡಿಕೊಟ್ಟರೆ, ಆ ಕಾರಾಗೃಹವನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗುವುತ್ತದೆಂದು ಸಂಬಂಧಪಟ್ಟ ಅಧಿಕಾರಿಗಳು ತಳಿಸಿರುತ್ತಾರೆ ದಯವಿಟ್ಟು ಮಂತ್ರಿಗಳು ಕಂದಾಯ ಇಲಾಖೆಯಿಂದ ಈ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಅಲ್ಲಿ ಈ ರಸ್ತೆ ಮಾಡಲು ಸ್ಥಳ ಅನುವು ಮಾಡಿಕೊಡಬೇಕೆಂದು ತಮ್ಮಲ್ಲಿ ಕೋರುತ್ತೇನೆ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂತೆ ಸಿಬ್ಬಂದಿಯ ಕೊರತೆ ಇದೆ ಮತ್ತೆ ಅವರು ಈಗ ಹೇಳಿದ ಪ್ರಸ್ತಾವನೆ ಪರೀಶೀಲನೆ ಹಂತದಲ್ಲಿದ, ಖಂಡಿತವಾಗಿಯೂ ಅದನ್ನು ಗಮನದಲ್ಲಿಟ್ಟು ಕೊಂಡು ಕ್ರಮತೆಗೆದುಕೊಳ್ಳುತ್ತೇವೆ

ಅಧ್ಯಕ್ಷರು ಮಹಾದೇವಪ್ಪ ಯಾದವಾಡರವರು, ಮಾತನಾಡುವುದು

ಶ್ರೀ ಮಹಾದೇವಪ್ಪ ಯಾದವಾಡ ಮಾನ್ಯ ಅಧ್ಯಕ್ಷರೆ, ಫೈಲ್ ತಂದಿಲ್ಲ, ಫೋಟೊ ಎಲ್ಲವನ್ನು ತೋರಿಸಬೇಕು, 16ನೇ ತಾರೀಖು, ಸೋಮವಾರ

ಮಾತನಾಡುತ್ತೇನೆ

ಅಧ್ಯಕ್ಷರು ಸದ್ಯಕ್ಕೆ ನಿಮ್ಮಲ್ಲಿ ಮಾಹಿತಿ ಇಲ್ಲ, ಆಯಿತು ಗಮನಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ, ಪಿ ಸಿ ಮೋಹನ್ ಅವರು ಬಂದಿಲ್ಲ, ಲಾಲಾಜಿ ಮೆಂಡನ್ ಅವರು ಮಾತನಾಡುವುದು

3 ಗಮನ ಸೆಳೆಯುವ ಸೂಚನೆ

ವಿಷಯ ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ

ಶ್ರೀ ಲಾಲಾಜಿ ಆರ್ ಮೆಂಡನ್ ಕಾಪು ಮಾನ್ಯ ಅಧ್ಯಕ್ಷರೆ, ಕಾಪು ಕ್ಷೇತ್ರಕ್ಕೆ ಬಯಲು ರಂಗಮಂದಿರ ಮಂಜೂರು ಮಾಡುವ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನ ಸೆಳೆಯುತ್ತಾ, ನಮ್ಮ ಕಾಪು ಕ್ಷೇತ್ರ ನಮ್ಮ ಉಡುಪಿ ಜಿಲ್ಲೆಯಲ್ಲಿ ಬರುವುದರಿಂದ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಬಹಳ ಮುಂದುವರೆದ ಜಿಲ್ಲೆಯಾಗಿದೆ ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ, ಜಾನಪದ, ನಾಟಕಗಳೆಲ್ಲಾ ಬಹಳ ಪ್ರಸಿದ್ಧಿಯಾಗಿದೆ ಇಂತಹ ಒಂದು ಕಲೆಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ನಮ್ಮ ಕಾಪು ಕ್ಷೇತ್ರ ನಮ್ಮ ರಾಷ್ಟ್ರೀಯ ಹೆದ್ದಾರಿ ಬರುವ ಬಂಗಲೆ, ಮೈದಾನ ಪ್ರದೇಶದಲ್ಲಿ ಬಯಲು ರಂಗಮಂದಿರ ಅವಶ್ಯಕತೆ ಇದೆ ಈಗಾಗಲೆ ಅಲ್ಲಿಯ ಸ್ಥಳೀಯ ಬಂಗಲೆ ಮೈದಾನ ಪ್ರದೇಶಗಳಲ್ಲಿ ಸ್ವಾತಂತ್ರೋತ್ಸವ, ಗಣ ರಾಜ್ಯೋತ್ಸವ ಹಾಗು ಇತರೆ ಶಾಲಾ ಕಾಲೇಜುಗಳ ವಿವಿಧ ಕಾರ್ಯಕ್ರಮಗಳು, ಚಟುವಟಿಕೆಗಳೆಲ್ಲಾ ಅಲ್ಲಿ ನಡೆಯುತ್ತಿದೆ, ಜೊತೆಗೆ ನಮ್ಮಲ್ಲಿ ಹವ್ಯಾಸಿ ವೃತ್ತಿಪರ ನಾಟಕತಂಡಗಳಿವೆ, ಯಕ್ಷಗಾನ ವಿಶೇಷವಾಗಿದೆ ಹಾಗಾಗಿ ಆ ಒಂದು ಬಯಲು ರಂಗಮಂಟಪವನ್ನು ಉತ್ತಮಗೊಳಿಸಿ ನಮಗೊಂದು ರಂಗ ಮಂಟಪವನ್ನು ಕೂಡ ಕೊಟ್ಟರೆ ನಮ್ಮ ಸಾಂಸ್ಕೃತಿಕ ಕಲೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಜೊತೆಗೆ ಇದು ರಾಷ್ಟ್ರೀಯ ಹೆದ್ದಾರಿಯಲ್ಲೇ ಇರುವುದರಿಂದ ವಾಹನ ಸೌಕರ್ಯಕ್ಕು ಕೂಡ ಬಹಳ ಅನುಕೂಲವಿದೆ

ಅಧ್ಯಕ್ಷರು ಗಮನ ಸೆಳೆಯುವುದೆಂದರೆ, ನಿಂತುಕೊಂಡು ಭಾಷಣ